**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 166/2020**

**ಚಾ.ಸಾ– 1**

**ಫ್ರಾ.ಸಾ – 1**

**ಸಾಕ್ಷಿಗೆ ದಿನಾಂಕ 26 –03–2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಈರಮ್ಮ |
| ತಂದೆಯ ಹೆಸರು | ಃ | ಸಂಗಪ್ಪ ನಾಯ್ಕೋ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಮನೆಕೆಲಸ |
| ವಾಸಸ್ಥಳ | ಃ | ಇಜೇರಿ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಆರೋಪಿತರು ಗೊತ್ತು. ಚಾಸಾ 4 ರಿಂದ 10 ಗೊತ್ತು. ಈಗ್ಗೆ ಸುಮಾರು 4 ವರ್ಷಗಳ ಹಿಂದೆ ಇಜೇರಿ ಗ್ರಾಮದ ನಮ್ಮ ಮೈದುನ ಚಾಸಾ–4 ನಿಂಗಣ್ಣರವರ ಮನೆಯ ಮುಂದೆ ತಿಪ್ಪೆ ಇದ್ದು ಅಲ್ಲಿ ಜಗಳ ಆಗಿರುತ್ತದೆ. ಸದರಿ ತಿಪ್ಪೆಯಲ್ಲಿನ ಕಸವನ್ನು ಆರೋಪಿ ಸಾಯಬಣ್ಣರವರು ಟ್ರ್ಯಾಕ್ಟರಿನಲ್ಲಿ ತುಂಬುತ್ತಿದ್ದರು. ಆಗ ನಾವು ಆರೋಪಿತರಿಗೆ ಸದರಿ ತಿಪ್ಪೆ ನಮಗೆ ಸೇರಿದ್ದು ಅಂತಾ ತಕರಾರು ಮಾಡಿರುತ್ತೇವೆ. ಆಗ ಸಾಯಬಣ್ಣರವರು ನಾವು ಕಸ ತುಂಬುತ್ತೇವೆ ಅಂತಾ ಹೇಳಿ ನಮಗೆ ಹೊಡೆಯಲು ಬಂದು ಚಾಸಾ–4 ನಿಂಗಣ್ಣರವರಿಗೆ ಬಡಿಗೆಯಿಂದ ತಲೆಗೆ ಮತ್ತು ಟೊಂಕಕ್ಕೆ ಹೊಡೆದಿರುತ್ತಾರೆ. ಆಗ ನಿಂಗಣ್ಣ ಕೆಳಗೆ ಬಿದ್ದಿರುತ್ತಾರೆ. ಆಗ ನಾವು ಬಿಡಿಸಲು ಹೋಗಿದ್ದು ಆಗ ನಮಗೂ ಕೂಡ ಅಯ್ಯಣ್ಣ ಹೊಡೆಯಲು ಬಂದಿರುತ್ತಾನೆ. ಅವರು ನಮಗೆ ಅವಾಚ್ಯ ಶಬ್ದಗಳಾದ ಬಸವಿ ಸೂಳಿ ಅಂತಾ ಬೈದಿರುತ್ತಾರೆ. ಆರೋಪಿತರು ಚಾಸಾ–5 ಅಂಬಲಮ್ಮರವರಿಗೆ ಕೈಯಿಂದ ಹೊಡೆದಿರುತ್ತಾರೆ. ಆರೋಪಿ ನಾಗಮ್ಮ ಅಂಬಲಮ್ಮರವರ ಕೂದಲು ಹಿಡಿದು ಜಗ್ಗಿರುತ್ತಾರೆ. ಆರೋಪಿತರಾದ ನಾಗಮ್ಮ, ಸಾಬಣ್ಣ, ಅಂಬಲಪ್ಪ, ಬಸವರಾಜ, ಶಂಕ್ರಪ್ಪ , ಈಶಪ್ಪ, ಅಯ್ಯಣ್ಣ ಬಂದು ನಮ್ಮೊಂದಿಗೆ ಜಗಳ ಮಾಡಿರುತ್ತಾರೆ. ನಾನು, ನನ್ನ ಮೈದುನ ನಿಂಗಪ್ಪ , ಅತ್ತೆ ಅಂಬಲಮ್ಮ ಮತ್ತು ನಮ್ಮ ಮಾವನ ಮಗ ಶಿವು ನಾಲ್ಕು ಜನರಿದ್ದೆವು. ಆ ನಂತರ ನಮಗೆ ಹೊಡೆದಿರುತ್ತಾರೆ ಅಂತಾ ದೂರು ದಾಖಲಿಸಿರುತ್ತೇವೆ. ಪ್ರಕರಣ ಸಲ್ಲಿಸಿದ ನಂತರ ಪೊಲೀಸರು ಪಂಚನಾಮೆ ಮಾಡಲು ಘಟನೆಯ ಮರುದಿನ ಬಂದು ಪಂಚನಾಮೆ ಜರುಗಿಸಿರುತ್ತಾರೆ. ಘಟನಾ

ಸ್ಥಳವನ್ನು ಬಸವರಾಜ ತೋರಿಸಿರುತ್ತಾರೆ. ಪೊಲೀಸರು ಪಂಚನಾಮೆ ಮಾಡಿ ಛಾಯಾಚಿತ್ರಗಳನ್ನು ತೆಗೆದುಕೊಂಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ದೂರಾಗಿದ್ದು ಅದರ ಮೇಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ–1 ಎಂದು, ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ 1(ಎ) ಎಂದು ಗುರ್ತಿಸಲಾಯಿತು. ಆರೋಪಿತರು ನಮಗೆ ಹೊಡೆಯಲು ಉಪಯೋಗಿಸಿದ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬಡಿಗೆಗಳು ನ್ಯಾಯಾಲಯದಲ್ಲಿ ಇಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಬಡಿಗೆಗಳನ್ನು ನೋಡಿ ಇವು ಅಲ್ಲ. ಸದರಿ ಬಡಿಗೆಗಳಿಗಿಂತ ಸ್ವಲ್ಪ ದಪ್ಪ ಇದ್ದವು ಎಂದು ನುಡಿಯುತ್ತಾರೆ. ನಮ್ಮೊಂದಿಗೆ ಗಲಾಟೆ ಮಾಡಿದ ಆರೋಪಿತರನ್ನು ನೋಡಿ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂಡಾಧಿಕಾರಿಗಳು, ಜೇವರಗಿ